ಸಮಾರಂಭದ ಸುದಿನ. ವಿಶ್ವಸಂಸ್ಥೆಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಜಗತ್ತಿನ ಎಲ್ಲ ದೇಶಗಳಿಂದ ಪ್ರತಿನಿಧಿಗಳು ಬಂದಿದ್ದರು. ಈ ಅವಕಾಶ ನನಗೆ ಒಲಿದಾಗ ನಿಜಕ್ಕೂ ನನಗೆ ಧನ್ಯತಾ ಭಾವ. ಗುರು ಎಂ.ಎಲ್.ವಸಂತಕುಮಾರಿ ಅವರ ಆಶೀರ್ವಾದ, ಸತತ ಮಾರ್ಗದರ್ಶನ, ಗುರು ಹಿರಿಯರ ಶುಭ ಹಾರೈಕೆ, ನನ್ನ ಸಾಧನೆ, ಪರಿಶ್ರಮದ ಫಲವಿದು ಎಂದೇ ಭಾವಿಸಿಕೊಂಡಿದ್ದೇನೆ' ಎನ್ನುತ್ತಾರೆ ವಿದುಷಿ ಸುಧಾ ರಘುನಾಥನ್.

ಚೆನ್ನೈಯ ಸಣ್ಣ ಸಂಗೀತ ಸಭಾದಲ್ಲಿ ವೇದಿಕೆ ಏರಿ ಹಾಡುತ್ತಿದ್ದ ಈ ಬೆಂಗಳೂರು ಮೂಲದ ಇವರಿಗೆ ಗುರು ಎಂಎಲ್‌ವಿ ಮೇಲೆ ಅಪಾರ ಪ್ರೀತಿ, ಗೌರವ, ಆದರ, ಅಭಿಮಾನ. ಪ್ರೀತಿಯಿಂದ 'ಎಂಎಲ್‌ವಿ ಅಮ್ಮ' ಎಂದೇ ಕರೆಯುವ ಸುಧಾ ರಘುನಾಥನ್, 'ಎಂಎಲ್‌ವಿ ಅಮ್ಮ ಅವರು ಇಲ್ಲದೇ ಇರುತ್ತಿದ್ದರೆ ನನ್ನ ಸಂಗೀತ ಪಯಣ ಇಷ್ಟು ಮುಂದೆ ಬರಲು ಸಾಧ್ಯವೇ ಇರುತ್ತಿರಲಿಲ್ಲ. ನನ್ನಲ್ಲಿ ಇರುವ ಸಂಗೀತ ಕಲೆಗೆ ನೀರೆರೆದು ಪೋಷಿಸಿದ ಮಹಾತಾಯಿ ಅವರು. ಸಂಗೀತದ ಬೀಜ ಬಿತ್ತಿ ಧೈರ್ಯ, ಸಂಗೀತದಲ್ಲಿ ನಿರಂತರತೆ, ಕಛೇರಿಯ ಪರಿಯನ್ನು ನನಗ ಹೇಳಿಕೊಡುವಲ್ಲಿ ಅವರು ಪಟ್ಟ ಪರಿಶ್ರಮ ಎಂದೆಂದಿಗೂ ಸ್ಮರಣೀಯ. ಅವರೊಂದಿಗೆ ಸದಾ ಸಹಗಾಯನ ನಡೆಸುತ್ತಿದ್ದೆ. ನಿರಂತರ ಒಡನಾಟದಿಂದಾಗಿ ಈಗ ಸಂಗೀತದಲ್ಲಿ ನನ್ನದೇ ಆದ 'ಸಂಗೀತ ಸ್ವಂತಿಕೆ' (ಮ್ಯೂಸಿಕಲ್ ಐಡೆಂಟಿಟಿ) ಬೆಳೆದಿದೆ' ಎಂದು ಹೆಮ್ಮೆಯ ಮಾತುಗಳನ್ನು ಹೇಳುತ್ತಾರೆ.

### ಫ್ಯೂಷನ್‌ನತ್ತ ಒಲವು

ಸಾಮಾನ್ಯವಾಗಿ ಕರ್ನಾಟಕ ಸಂಗೀತದ ಹಿರಿಯ ಕಲಾವಿದರು ಫ್ಯೂಷನ್, ಸಿನಿಮಾ ಸಂಗೀತಗಳತ್ತ ಚಿತ್ತ ಹರಿಸುವುದು ಅಪರೂಪ. ಆದರೆ ಕೆಲವು ಖ್ಯಾತ ಕಲಾವಿದರು ಸಂಗೀತದಲ್ಲಿ ತಾರತಮ್ಯವನ್ನಾಗಲಿ, ಮಡಿವಂತಿಕೆಯನ್ನಾಗಲಿ ತೋರದೆ ಎಲ್ಲ ಪ್ರಕಾರಗಳತ್ತ ಸಮಾನ ಆಸಕ್ತರಾಗಿರುತ್ತಾರೆ. ಶಾಸ್ತ್ರೀಯ ಸಂಗೀತದ ಜತೆಗೆ ಸಿನಿಮಾ ಸಂಗೀತ, ಪಾಶ್ಚಾತ್ಯ ಸಂಗೀತವನ್ನೂ ಹಾಡುತ್ತಾರೆ. ಸುಧಾ ರಘುನಾಥನ್ ಕೂಡ ಇದಕ್ಕೆ ಹೊರತಲ್ಲ. ಅವರೇ ಹೇಳುವಂತೆ..'ನಾನು ಫ್ಯೂಷನ್ ಮತ್ತು ಸಿನಿಮಾ ಸಂಗೀತವನ್ನೂ ಹಾಡುತ್ತೇನೆ. ಹೆಸರಾಂತ ಜಾಸ್ ಕಲಾವಿದರಾದ ಅಮಿತ್ ಹೇರಿ ಮತ್ತು ಬಾಸ್ ಗಿಟಾರ್ ಕಲಾವಿದ ಕೈತ್‌ಪೀಟರ್ ಅವರ ಜತೆಗೆ ಹಾಡಿದ್ದೇನೆ. 'ಗ್ಲೋಬಲ್ ಮ್ಯೂಸಿಕ್' ಪ್ರಾಜೆಕ್ಟ್‌ಗಾಗಿ ಸಾಕಷ್ಟು ಕೆಲಸ ಮಾಡಿದ್ದೇನೆ. ಇದರಲ್ಲಿ ವಿಶ್ವದ ಎಲ್ಲ ಸಂಗೀತವನ್ನೂ ಒಂದೆಡೆ ತರುವ ಪ್ರಯತ್ನ ಮಾಡಿದ್ದೇವೆ. ಹಿಂದೂಸ್ತಾನಿ ಸಂಗೀತಗಾರರ ಜತೆಗೆ ಅನೇಕ ಜುಗಲ್‌ಬಂದಿ ಕಛೇರಿ ನೀಡಿದ್ದೇನೆ. ತಮಿಳು ಮತ್ತು ಮಲಯಾಳಂ ಸಿನಿಮಾಗಳಲ್ಲಿ ಹಾಡಿದ್ದೇನೆ. ಸದ್ಯ ತಮಿಳು ಸಿನಿಮಾಕ್ಕಾಗಿ ಸಂಗೀತ ಸಂಯೋಜನೆಯಲ್ಲಿ ತೊಡಗಿಸಿಕೊಂಡಿದ್ದೇನೆ' ಎಂದು ತಮ್ಮ ಸಂಗೀತ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ.



ಅಷ್ಟೇ ಅಲ್ಲ. ಗಾಯನದ ಜತೆಗೆ ಇತರ ಉತ್ತಮ ಹವ್ಯಾಸಗಳನ್ನೂ ಬೆಳೆಸಿಕೊಂಡಿದ್ದಾರೆ. ಎಲ್ಲ ರೀತಿಯ ಸಂಗೀತವನ್ನೂ ಕೇಳುತ್ತಾರೆ. ಪಾಶ್ಚಾತ್ಯ ಸಂಗೀತವನ್ನು ಬಹುವಾಗಿ ಆಸ್ವಾದಿಸುತ್ತಾರೆ. ಕಥೆ, ಕಾದಂಬರಿ ಓದುವ ಹವ್ಯಾಸವೂ ಇವರಿಗಿದೆ. ಶಾಪಿಂಗ್, ಅಡುಗೆ ಮಾಡುವುದು, ಹೊಲಿಗೆ, ಫ್ಯಾಷನ್ ಡಿಸೈನಿಂಗ್ ಎಲ್ಲವನ್ನೂ ಇಷ್ಟಪಡುತ್ತಾರೆ. ಸಿನಿಮಾ ನೋಡುವುದು ಕೂಡ ಹವ್ಯಾಸವೇ. ಗಣೇಶನ ಮೂರ್ತಿ ಸಂಗ್ರಹ ಮತ್ತೊಂದು ಪ್ರಿಯವಾದ ಹವ್ಯಾಸ. ಇವರ ಬಳಿ 700 ಗಣೇಶ ಹಾಗೂ ಬೇರೆ ಬೇರೆ ದೇಶಗಳಿಂದ ಸಂಗ್ರಹಿಸಿದ 35 ವಿಭಿನ್ನ ಮುಖವಾಡಗಳ ಸಂಗ್ರಹವೂ ಇದೆ.

### ಕಲ್ಪನಾ ಸ್ವರದ ವೈವಿಧ್ಯ

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಕಲ್ಪನಾಸ್ವರಕ್ಕೆ ವಿಶೇಷ ಮಹತ್ವ. ಒಬ್ಬ ಕಲಾವಿದನ ಪಾಂಡಿತ್ಯ, ಸಾಮರ್ಥ್ಯದ ಅನಾವರಣವಾಗುವುದು ಇಲ್ಲಿ. ರಾಗದಲ್ಲಿ, ಕೀರ್ತನೆಯಲ್ಲಿ 'ಸಂಗತಿ'ಗಳು, ಸ್ವರಪ್ರಸ್ತಾರ, ಚಿಟ್ಟೆಸ್ವರದಂತೆಯೇ ಕಲ್ಪನಾಸ್ವರವೂ ಕಲಾವಿದನ ವಿದ್ವತ್ ಅನ್ನು ಎತ್ತಿತೋರಿಸುತ್ತದೆ. ಈ ಪರಿಕಲ್ಪನೆ ಶತ ಶತಮಾನಗಳಿಂದಲೂ ಬಂದಿರುವಂಥದ್ದು. ಒಂದು ನಿರ್ದಿಷ್ಟ ಪರಿಧಿಯೊಳಗೆ ಕಲಾಕಾರ ರಾಗದ ಮತ್ತು ತಾಳದ ಎಲ್ಲೆಯನ್ನು ಮೀರದೆ ಸಂಗೀತ ಸ್ವರಗಳನ್ನು ವಿಸ್ತರಿಸುವುದೇ ಆಗಿದೆ. ಇದಕ್ಕೆ ಸಾಧನೆ ಬೇಕು, ಸೃಜನಶೀಲ ಮನಸ್ಸು ಮೇಲಾಗಿ ಅಪರಿಮಿತ ಶ್ರದ್ಧೆ, ಆಸಕ್ತಿ ಇರಬೇಕು. ಮನೋಧರ್ಮ ಎನ್ನುವುದು ಸಂಗೀತದ 'ಜೀವ' ಎಂದೇ ಹೇಳಬಹುದು. ಒಬ್ಬ ಕಲಾವಿದನ ಮನೋಧರ್ಮ ಸಂಗೀತ ಕೇಳುಗನನ್ನು ಸೆಳೆಯಿತೆಂದರೆ ಆ ಕಛೇರಿ ಗೆದ್ದಂತೆ. ರಾಗ ವಿಸ್ತಾರ, ಸ್ವರ ಪ್ರಸ್ತಾರ, ರಾಗಂ ತಾನಂ ಪಲ್ಲವಿ ಪ್ರಸ್ತುತ ಪಡಿಸುವಿಕೆ.. ಎಲ್ಲದರಲ್ಲೂ ಕಲಾವಿದನ ಸೃಜನಶೀಲತೆಗೆ ವಿಪುಲ ಅವಕಾಶಗಳಿವೆ. ಸಂಗೀತಕ್ಕೆ ಜೀವಂತ ಕಳೆ ತರುವುದು ಮನೋಧರ್ಮವೇ ಆಗಿದೆ. ಸುಧಾ ರಘುನಾಥನ್ ಅವರ ಮನೋಧರ್ಮ ಸಂಗೀತ ಕೇಳುವುದು ಬಹಳ ಆಪ್ಯಾಯಮಾನ. ಹೀಗಾಗಿಯೇ ಅವರ ಪ್ರತಿಯೊಂದು ಕಛೇರಿಯೂ ಕೇಳುಗರನ್ನು ಸೂಜಿಗಲ್ಲಿನಂತೆ ಸೆಳೆಯುವುದು ಅಲ್ಲದೆ ಸಭಾಂಗಣ ಕಿಕ್ಕಿರಿದು ತುಂಬುವುದು.

ಸಂಗೀತದ ಜತೆಗೆ ಸಮಾಜಸೇವೆಯನ್ನೂ ಮಾಡುತ್ತಿರುವುದು ಈ ಕಲಾವಿದೆಯ ಮತ್ತೊಂದು ಹೆಚ್ಚುಗಾರಿಕೆ. ಚೆನ್ನೈಯಲ್ಲಿ ಚಾರಿಟೆಬಲ್ ಟ್ರಸ್ಟ್ ಸ್ಥಾಪಿಸಿ ಸಂತ್ರಸ್ತರ ನೋವಿಗೆ ಸಂಗೀತದ ಮೂಲಕ ಸ್ಪಂದಿಸಿದವರು ಈ ವಿದುಷಿ. 1999ರಲ್ಲಿ ಚೆನ್ನೈಯಲ್ಲಿ 'ಸಮುದಾಯ ಪ್ರತಿಷ್ಠಾನ' ಆರಂಭಿಸಿದರು. ಆಗ ಕಾರ್ಗಿಲ್ ಸಮರದ ಬಗ್ಗೆ ಸುದ್ದಿ ಪ್ರಚಾರದಲ್ಲಿತ್ತು. ಈ ಸಮರದಲ್ಲಿ ಕುಟುಂಬ ಸದಸ್ಯರನ್ನು ಕಳೆದುಕೊಂಡವರ ಬಗ್ಗೆ, ಹೊಸದಾಗಿ ಮದುವೆಯಾದವರು ತಮ್ಮ ಸಂಗಾತಿಯನ್ನು ಕಳೆದುಕೊಂಡ ಬಗ್ಗೆ, ಮಕ್ಕಳು ತಂದೆ ತಾಯಿಯರನ್ನು, ಹೆತ್ತವರು ಮಕ್ಕಳನ್ನು ಕಳೆದುಕೊಂಡದ್ದು.. ಇವೆಲ್ಲವೂ ನಿಜಕ್ಕೂ ಮನಕಲಕುವಂಥದ್ದು. ಇಂಥವರ ವೇದನೆ, ನೋವು ನಿವಾರಣೆಗಾಗಿ ಏನಾದರೂ ಮಾಡಬೇಕು ಎಂಬ ಇವರ ತುಡಿತದಿಂದಾಗಿ ತಮ್ಮ ಹಣದ ಜತೆಗೆ ಟ್ರಸ್ಟ್‌ಗಾಗಿ ಕೆಲವು ದಾನಿ ಸಂಘಟನೆಗಳು ನೀಡಿದ ಹಣವನ್ನು ಬಳಸಿ ಸಂತ್ರಸ್ತರಿಗೆ ನೀಡಿದ್ದರು. ಒಬ್ಬ ಕಲಾವಿದೆಯ ಸಾಮಾಜಿಕ ಕಳಕಳಿ ಇದರಿಂದ ವ್ಯಕ್ತವಾಗುತ್ತದೆ.

ಇಂತಹ ಹಿರಿಯ ಕಲಾವಿದೆಗೆ ದೇಶದ ಅತ್ಯುನ್ನತ ಗೌರವ ಪದ್ಮಭೂಷಣ ಪುರಸ್ಕಾರವೂ ಸೇರಿದಂತೆ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಸಂದಿವೆ. ಇವೆಲ್ಲದರ ಜತೆಗೆ ಇದೀಗ ಸಾಮಗಾನ ಮಾತಂಗ ರಾಷ್ಟ್ರೀಯ ಪುರಸ್ಕಾರದ ಗರಿ..! ■